**<u>ಸಾಕ್ಷಿಯನ್ನು ಪ್ರಮಾಣ ವಚನ ಬೋದಿಸಲಾದ ದಿನಾಂಕಃ 01-04-2024.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಆರ ಜಿ ಜೆ ವಕೀಲರಿಂದಃ</u>**

1. ಸರ್ವೆ ನಂ.121/2 ಜಮೀನು ವಾದಿ ಗುರವ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಪುನಃ ಸರಿಯಲ್ಲ ಎಂದು ಹೇಳುತ್ತಾರೆ. ಸರ್ವೆ ನಂ.121/5 ಜಮೀನನ್ನು ನನ್ನ ತಂದೆ ಹಣುಮಂತ ಮಹಾದೇವ ಗುರವ, ಪ್ರವೀಣ ರವೀಂದ್ರ ಗುರವ, ಸರಸ್ವತಿ ರವೀಂದ್ರ ಗುರವ, ಜೈನು ಭರಮಾನಿ ಪಾಟೀಲ ರವರಿಂದ ಖರೀದಿ ಮಾಡಿದ್ದಾರೆ. ನಮ್ಮ ತಂದೆ ಸದರಿ ಆಸ್ತಿಯನ್ನು ದಿನಾಂಕ ಃ 10-12-2007 ಖರೀದಿ ಮಾಡಿದ್ದಾರೆ. ಸದರಿ ಆಸ್ತಿಯನ್ನು ಖರೀದಿಸುವ ಮುಂಚೆ ದಿನಪತ್ರಿಕೆಯಲ್ಲಿ ಜಾಹಿರಾತು ಹೊರಡಿಸಲಾಗಿದೆಯೇ ಎನ್ನುವ ಪ್ರಶ್ನೇಗೆ ಸಾಕ್ಷಿಯು ಹೊರಡಿಸಿರಬಹುದು ಎಂದು ಹೇಳುತ್ತಾರೆ. ಜಾಹಿರಾತು ಹೊರಡಿಸಲಾಗಿದೆ ಎಂದು ನೀವು ಹೇಳಲು ದಿನಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದಿರಾ ಎನ್ನುವ ಪ್ರಶ್ನೇಗೆ ಮಾಡಿರಬಹುದು ಎಂದು ಹೇಳುತ್ತಾರೆ. ಆಸ್ತಿಯನ್ನು ಖರೀದಿಸುವ ಮುಂಚೆ ಋಣಭಾರರಾಹಿತ್ಯ ಪ್ರಮಾಣ ಪತ್ರ, ಡೈರಿ ಉತಾರ, ಪಹಣಿ ದಾಖಲೆಗಳನ್ನು ನೋಡಲಾಗಿದೆ. ಸದರಿ ಎಲ್ಲಾ ದಾಖಲೆಗಳನ್ನು 1981-82 ರ ನಂತರದ ಎಲ್ಲಾ ವರ್ಷದ ದಾಖಲೆಗಳನ್ನು ನೋಡಲಾಗಿದೆ. 1981-82 ರ ಪಹಣಿಯಲ್ಲಿ ಡಾಖಲು ನಾರಾಯಣ ಗುರವ ರವರ ಹೆಸರು ಇತ್ತು.

ಸದರಿ ಜಮೀನು ಡಾಖಲು ನಾರಾಯಣ ಗುರವ ರವರಿಗೆ ಹೇಗೆ ಬಂದಿತ್ತು ಎಂದು ವಿಚಾರ ಮಾಡಿರಲಿಲ್ಲ. ಪ್ರತಿವಾದಿ ನಂ.1- ಡಾಖಲು ರವರ ಸಹೋದರ ಸಹೋದರಿಯರ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ.121/2 ಆಸ್ತಿ ಡಾಖಲು ನಾರಾಯಣ ಗುರವ ರವರ ಸ್ವಯಾರ್ಜಿತ ಆಸ್ತಿ ಅಲ್ಲ ಅವರಿಗೆ ಅವರ ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ನಾರಾಯಣ ರವರು ತೀರಿಕೊಂಡ ನಂತರ ಅವರ ವಾರಸುದಾರರ ನಡುವೆ ದಾವಾ ಆಸ್ತಿಗಳಲ್ಲಿ ಪಾಲುವಾಟ್ನಿ ಆಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

2. ಸರ್ವೆ ನಂ.121/6 ಮತ್ತು 121/7 ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಹಾಗೂ ನಮಗೆ ಅದು ಸಂಬಂಧಪಟ್ಟಿಲ್ಲ. ಸರ್ವೆ ನಂ.121/6 ಮತ್ತು 121/7 ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲದಿದ್ದರು ಸದರಿ ಆಸ್ತಿಗಳ ಕುರಿತು ಆದ ಮಾರಾಟ ವಾದಿಗಳ ಮೇಲೆ ಬಂಧನಕಾರಿ ಎಂದು ಸುಳ್ಳು ವಿಷಯ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಯಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಎರಡು ಆಸ್ತಿಗಳ ಕುರಿತು ನನಗೆ ಗೊತ್ತಿಲ್ಲ ಎಂದು ಪುನಃ ನುಡಿಯುತ್ತಾರೆ. ಸರ್ವೆ ನಂ.121 ಹಾಗೂ ಅದರ ಪೂಟ ಹಿಸ್ಸೆ ಆಸ್ತಿಗಳಲ್ಲಿ ವಾದಿಯರಿಗೆ ಸಮ ಪಾಲು ಇದೆ ವಾದಿಯರ ಕುಟುಂಬದಲ್ಲಿ ಸದರಿ ಆಸ್ತಿಗಳಲ್ಲಿ ಪಾಲುವಾಟ್ನಿ ಆಗಿಲ್ಲ ರಾ ಎಲ್ಲಾ ವಿಚಾರ ನನಗೆ ಗೊತ್ತಿದ್ದು ಸುಳ್ಳು ವಿಷಯಗಳನ್ನು ಮುಖ್ಯ

ವಿಚಾರಣೆ ಪ್ರಮಾಣ ಪತ್ರದಲ್ಲಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಹಾಜರು ಮಾಡಿರುವ ದಾಖಲೆಗಳನ್ನು ನಾನು ನೋಡಿಲ್ಲ. ವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**